# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

6ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು –560 003

ಸಂಖ್ಯೆ: ಆರ್1/ಅರೇಬಿಕ್.ಪ.ಕಾ/04/2018–19

ದಿನಾಂಕ: 10.08.2018

## ಅಧಿಸೂಚನೆ

ವಿಷಯ: ಫೆಬ್ರವರಿ–2019ನೇ ಸಾಲಿನಲ್ಲಿ ನಡೆಯಲಿರುವ ಅರೇಬಿಕ್ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

---

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಫೆಬ್ರವರಿ–2019ರ ಮಾಹೆಯಲ್ಲಿ ಅರೇಬಿಕ್ ಪರೀಕ್ಷೆಗಳಾದ ಉಸ್ತಾನಿಯಾ, ಫೌಕಾನಿಯಾ, ಅಫ್ಜಲ್–ಉಲ್–ಉಲ್ಮಾ ಮಧ್ಯಮ ಮತ್ತು ಅಫ್ಜಲ್–ಉಲ್–ಉಲ್ಮಾ ಉತ್ತಮ ಪರೀಕ್ಷೆಗಳನ್ನು ನಡೆಸಲಾಗುವುದು. ಈ ಪರೀಕ್ಷೆಗೆ ಖಾಸಗಿ/ ರೆಗ್ಯುಲರ್ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇಲಾಖೆಯಿಂದ ಮನ್ನಣೆ ಪಡೆದ ಶಾಲಾ ಕಾಲೇಜುಗಳ ಮೂಲಕ ಬೋಧನಾ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಜಿಗಳನ್ನು ಸಲ್ಲಿಸುವುದು.

**ಪರೀಕ್ಷಾ ವಿಷಯ ಮತ್ತು ಪರೀಕ್ಷಾ ಶುಲ್ಕದ ವಿವರ:**

| ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕದ ವಿವರ | | | | ಒಟ್ಟು ಶುಲ್ಕ |
|---|---|---|---|---|---|
| | ಪರೀಕ್ಷಾ ಶುಲ್ಕ | ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಲ್ಯಾಮಿನೇಷನ್ ಶುಲ್ಕ | |
| 1) ಉಸ್ತಾನಿಯಾ | 224–00 | 05–00 | 05–00 | 25–00 | 259–00 |
| 2) ಫೌಕಾನಿಯಾ | 354–00 | 05–00 | 05–00 | 25–00 | 389–00 |
| 3) ಅಫ್ಜಲ್ –ಉಲ್–ಉಲ್ಮಾ ಮಧ್ಯಮ | 484–00 | 05–00 | 05–00 | 25–00 | 519–00 |
| 4) ಅಫ್ಜಲ್ –ಉಲ್–ಉಲ್ಮಾ ಉತ್ತಮ | 614–00 | 05–00 | 05–00 | 25–00 | 649–00 |

**ಪರೀಕ್ಷಾ ಶುಲ್ಕವನ್ನುಈ ಕೆಳಗೆ ನಿಗಧಿಪಡಿಸಿರುವ ದಿನಾಂಕದೊಳಗೆ ಪಾವತಿಸುವುದು:**

| ಕ್ರಸಂ | ವಿವರ | ದಿನಾಂಕ: |
|---|---|---|
| 1 | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 18.09.2018 |
| 2 | ನೆಫ್ಟ್ ಚಲನ್ ಮೂಲಕ ಬ್ಯಾಂಕಿಗೆ ಹಣ ತುಂಬುವ ದಿನಾಂಕ | 19.09.2018 |
| 3 | ಅರೇಬಿಕ್ ಶಾಲೆ/ಕಾಲೇಜುಗಳು ಮಂಡಳಿಗೆ ಅರ್ಜಿಗಳನ್ನು ಸಲ್ಲಿಸಬೇಕಾದ ದಿನಾಂಕ | 24.09.2018 |
| 4 | ದಂಡ ಸಹಿತ ಪರೀಕ್ಷಾ ಶುಲ್ಕ ಪವತಿಸಲು ಕೊನೆಯ ದಿನಾಂಕ | 03.10.2018 |

ಅರೇಬಿಕ್ ಶಾಲೆ/ಕಾಲೇಜುಗಳ ಮುಖ್ಯಸ್ಥರು ಅಭ್ಯರ್ಥಿಗಳಿಂದ ಪಡೆದ ಪರೀಕ್ಷಾ ಶುಲ್ಕವನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ರವರ ಹೆಸರಿಗೆ

**NEFT ಚಲನ್ ಮೂಲಕ ದಿನಾಂಕ: 14.09.2018ರೊಳಗೆ ಪಾವತಿಸುವುದು ಹಾಗೂ** NEFT ಚಲನ್‌ನ ಮೂಲ ಪ್ರತಿಯನ್ನು ನಾಮಿನಲ್ ರೋಲ್‌ನೊಂದಿಗೆ ನೇರವಾಗಿ **ಶ್ರೀ ಸಿ.ವಿ.ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಆರ್. ಶಾಖೆ, 4ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03,** ಈ ವಿಳಾಸಕ್ಕೆ ಸಲ್ಲಿಸುವುದು. NEFT ಚಲನ್ ಲಗತ್ತಿಸದೇ ಇದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಶುಲ್ಕ ಪಾವತಿಸಲು ಅನುಕೂಲವಾಗುವಂತೆ NEFT ಚಲನ್ ಪ್ರತಿಯನ್ನು ಇದರೊಂದಿಗೆ ರವಾನಿಸಿದೆ.

**ವಿಶೇಷ ಸೂಚನೆ:–**

1. ನಿಗದಿತ ದಿನಾಂಕದ ನಂತರ ಶುಲ್ಕ ಪಾವತಿಗೆ ಅವಕಾಶವಿಲ್ಲ. ಯಾವುದೇ ವಿದ್ಯಾರ್ಥಿಯ ಶುಲ್ಕವನ್ನು ನಿಗದಿತ ದಿನಾಂಕದ ನಂತರ NEFT ಚಲನ್ ಮೂಲಕ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ.
2. ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸದಿದ್ದಲ್ಲಿ ಪ್ರತಿ ದಿನ ವಿಳಂಭಕ್ಕೆ ಪ್ರತಿ ವಿದ್ಯಾರ್ಥಿಗೆ ರೂ.150–00 (ರೂ.ನೂರ ಐವತ್ತು) ರಂತೆ ದಂಡ ವಿಧಿಸಲಾಗುವುದು.
3. ಮಂಡಳಿ ನಿಗಧಿಪಡಿಸಿದ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಲ್ಪಟ್ಟಿದ್ದಲ್ಲಿ ಆ ದಿನಗಳ ಮಾರನೆಯ ಕೆಲಸದ ದಿನವನ್ನು ಕೆಲಸದ ಕೊನೆಯ ದಿನವೆಂದು ಪರಿಗಣಿಸಲಾಗುವುದು.
4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇರುತ್ತದೆ. ಆದರೆ ಅರ್ಜಿ ಶುಲ್ಕ ರೂ.5/–, ಅಂಕಪಟ್ಟಿ ಶುಲ್ಕ ರೂ.5/– ಹಾಗೂ ಲ್ಯಾಮಿನೇಷನ್ ಶುಲ್ಕ ರೂ.25/– ಒಟ್ಟು **ರೂ.35**ಗಳನ್ನು ಕಡ್ಡಾಯವಾಗಿ ಪಾವತಿಬೇಕು. ಪರೀಕ್ಷಾ ಶುಲ್ಕದಿಂದ ವಿನಾಯಿತಿ ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಸಲ್ಲಿಸಬೇಕು.
5. ಅರೇಬಿಕ್ ಪಾಠಶಾಲಾ/ಕಾಲೇಜುಗಳ ಖಾಯಂ ನೊಂದಣಿ ಶುಲ್ಕ ಪಾವತಿಸದೇ ಇರುವವರು ಕ್ರಮವಾಗಿ ರೂ. 300/–, ರೂ.500/–ಗಳನ್ನು NEFT ಚಲನ್ ಮೂಲಕ ಪಾವತಿಸುವುದು. ಖಾಯಂ ನೋಂದಣಿ ಶುಲ್ಕ ಪಾವತಿಸಲು ಕ್ರಮಾವಾಗಿ ರೂ 500/– , ರೂ1000/– ಗಳನ್ನು NEFT ಚಲನ್ ಮೂಲಕ ಪಾವತಿಸುವುದು.

**ಅರೇಬಿಕ್ ಶಾಲಾ/ಕಾಲೇಜುಗಳ ಮುಖ್ಯಸ್ಥರು ಮಂಡಳಿಗೆ ಅರ್ಜಿಗಳನ್ನು ಸಲ್ಲಿಸುವ ಮುನ್ನ ಗಮನಿಸಬೇಕಾದ ಅಂಶಗಳು:**

1. **ಅರೇಬಿಕ್ ಶಾಲೆ/ಕಾಲೇಜುಗಳ ಪ್ರಸಕ್ತ ವರ್ಷದ ಮಾನ್ಯತೆ/ಮಾನ್ಯತೆ ನವೀಕರಣದ ಪ್ರತಿಯನ್ನು ಪರೀಕ್ಷಾ ಅರ್ಜಿಗಳ ಜೊತೆಯಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. ತಪ್ಪಿದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**
2. ಅರೇಬಿಕ್ ಪರೀಕ್ಷೆಗೆ ಸಂಬಂಧಿಸಿದಂತೆ ಉಸ್ತಾನಿಯಾ/ಫೌಕಾನಿಯಾ/ಅಫ್ಜಲ್–ಉಲ್–ಉಲ್ಮಾ–ಮಧ್ಯಮ/ಉತ್ತಮ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳು ಹಿಂದಿನ ವರ್ಷದ ಅರ್ಹ ವಿದ್ಯಾರ್ಹತೆಯ ಉತ್ತೀರ್ಣ ಅಂಕಪಟ್ಟಿಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು.
3. ಉಸ್ತಾನಿಯಾ ಪರೀಕ್ಷೆಗೆ 5 ಪತ್ರಿಕೆಗಳು ಕಡ್ಡಾಯವಾಗಿರುತ್ತದೆ. 7ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ 5ನೇ ಪತ್ರಿಕೆ ಆಂಗ್ಲ ಭಾಷೆಗೆ ವಿನಾಯಿತಿಯಿರುತ್ತದೆ. ಈ ಸಂಬಂಧ 7ನೇ ತರಗತಿಯ ದೃಢೀಕೃತ ಅಂಕಪಟ್ಟಿಯನ್ನು ಲಗತ್ತಿಸುವುದು.

4. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ **ಫೌಕಾನಿಯಾ ಪರೀಕ್ಷೆಯ 3ನೇ ಭಾಗದ 7ನೇ ಪತ್ರಿಕೆ ಆಂಗ್ಲ ವಿಷಯಕ್ಕೆ ವಿನಾಯಿತಿ ನೀಡಲಾಗುವುದು.** ಈ ಸಂಬಂಧ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ದೃಢೀಕೃತ ಉತ್ತೀರ್ಣ ಪ್ರಮಾಣ ಪತ್ರವನ್ನು ಲಗತ್ತಿಸುವುದು. ಪರೀಕ್ಷೆಯ ನಂತರ ವಿನಾಯಿತಿ ಕೋರಿ ಪತ್ರವನ್ನು ಸಲ್ಲಿಸಿದಲ್ಲಿ ಪರಿಗಣಿಸಲಾಗುವುದಿಲ್ಲ.
5. 2018–19ನೇ ಸಾಲಿನ ಅರೇಬಿಕ್ ಪರೀಕ್ಷೆಗಳಿಗೆ ಹಾಜರಾಗುವ ಶಾಲಾ ಅಭ್ಯರ್ಥಿಗಳು ಸಂಬಂಧಪಟ್ಟ ತರಗತಿಯ ವ್ಯಾಸಂಗದ ಅವಧಿ ಪೂರ್ಣಗೊಳಿಸುವ ಬಗ್ಗೆ ಶಾಲಾ ಮುಖ್ಯಸ್ಥರು ದೃಢೀಕರಿಸಿ ಸಲ್ಲಿಸಬೇಕು.
6. ಅರೇಬಿಕ್ ಪರೀಕ್ಷೆಗೆ ಸಂಬಂಧಿಸಿದಂತೆ ಉಸ್ತಾನಿಯಾ/ಫೌಕಾನಿಯಾ/ಅಫ್ಜಲ್–ಉಲ್–ಉಲ್ಮಾ–ಮಧ್ಯಮ/ಉತ್ತಮ ಪರೀಕ್ಷೆಗಳಿಗೆ ಪ್ರತ್ಯೇಕವಾಗಿ ನಾಮಯಾದಿ ಪಟ್ಟಿಯನ್ನು ಸಲ್ಲಿಸಬೇಕು. ನಾಮಯಾದಿ ಪಟ್ಟಿಯಲ್ಲಿ ಅಭ್ಯರ್ಥಿಗಳ ಮಾಹಿತಿಯನ್ನು ತಪ್ಪಿಲ್ಲದೆ **ಆಂಗ್ಲ ಭಾಷೆಯಲ್ಲಿ ನಮೂದಿಸಬೇಕು.**
7. ಓ.ಎಂ.ಆರ್ ಶೀಟ್‌ಗೆ ಅಭ್ಯರ್ಥಿಯ ಭಾವಚಿತ್ರವನ್ನು ಅಂಟಿಸಬೇಕಾಗಿರುವುದರಿಂದ ಇತ್ತೀಚಿನ 03 ಭಾವಚಿತ್ರಗಳನ್ನು ಪಡೆದು ಶಾಲಾ/ಕಾಲೇಜುಗಳಲ್ಲಿ ಕಾಯ್ದಿರಿಸಬೇಕು.
8. ಅರೇಬಿಕ್ ಉಸ್ತಾನಿಯಾ/ಫೌಕಾನಿಯಾ ಪರೀಕ್ಷೆಗಳಿಗೆ ಆಂಗ್ಲ ಭಾಷಾ ವಿಷಯಕ್ಕೆ ವಿನಾಯಿತಿ ಕೋರಿದ್ದಲ್ಲಿ ನಾಮಯಾದಿ ಪಟ್ಟಿಯಲ್ಲಿ ನಮೂದಿಸಬೇಕು.
9. ಪ್ರತಿ ಪರೀಕ್ಷೆಗೆ ಸಂಬಂಧಿಸಿಸದಂತೆ ಪ್ರತ್ಯೇಕವಾಗಿ ನಾಮಯಾದಿ ಪಟ್ಟಿಯನ್ನು ಸಲ್ಲಿಸುವುದು.
10. ಅರೇಬಿಕ್ ಶಾಲಾ ಕಾಲೇಜುಗಳಲ್ಲಿ ಅನುದಾನ ಸಂಹಿತೆ ನಿಯಮದಂತೆ ಮಕ್ಕಳ ಸಂಖ್ಯೆಯನ್ನು ಹೊಂದಿರಬೇಕು.
11. ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ನಿಗಧಿಗಿಂತ ಕಡಿಮೆಯಾದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿ, ಸಮೀಪದ ಪರೀಕ್ಷಾ ಕೇಂದ್ರಕ್ಕೆ ಲಗತ್ತಿಸಲಾಗುವುದು. ಈ ನಿಯಮ ವಾಚಾ ಪರೀಕ್ಷೆಗಳಿಗೂ ಸಹ ಅನ್ವಯವಾಗುತ್ತದೆ
12. ಖಾಸಗಿ ಅಭ್ಯರ್ಥಿಗಳ ಅರ್ಜಿಗಳನ್ನು ಮಂಡಳಿಯಿಂದ ಪಡೆದ ನೋಂದಣಿ ಅನುಮತಿ ಪತ್ರದೊಂದಿಗೆ ಸಲ್ಲಿಸಬೇಕು.
13. ಪುನರಾವರ್ತಿತ (ರಿಪೀಟರ್) ಅಭ್ಯರ್ಥಿಯಾಗಿದ್ದಲ್ಲಿ ಈ ಹಿಂದೆ ವ್ಯಾಸಂಗ ಮಾಡಿದ್ದ ಶಾಲಾ/ಕಾಲೇಜುಗಳ ಮೂಲಕವೇ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಬೇಕು. ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.
14. **ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಫೋನ್ ಸಂಖ್ಯೆ ತಪ್ಪದೆ ನಮೂದಿಸುವುದು.**

ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಗಳು :–**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು, ಉರ್ದು ಮತ್ತು ಭಾಷಾ ಅಲ್ಪಸಂಖ್ಯಾತ ನಿರ್ದೇಶನಾಲಯ, ಆಯುಕ್ತರ ಕಚೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ
3. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ
4. ನಿರ್ದೇಶಕರು (ಇ.ಪ) ರವರ ಹಾಗೂ ಕಾರ್ಯದರ್ಶಿಗಳು ಆಪ್ತ ಶಾಖೆಗೆ.
5. ಶಾಖಾಧಿಕಾರಿಗಳು, ಕಂಪ್ಯೂಟರ್ ಶಾಖೆರವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
6. ಸಂಬಂಧಿಸಿದ ಶಾಲಾ / ಕಾಲೇಜುಗಳ ಮುಖ್ಯಸ್ಥರುಗಳಿಗೆ.
7. ಕಛೇರಿ ಪ್ರತಿ.

G:\Arebic\ARABIC-2019\Notification-2019.docx